## ಇಲ್ಲಿಯವರೆಗೆ



ವಿಜಯಮ್ಮ, ಪ್ರಭಾಕರರಾಯರು ಅಪೂರ್ವಳನ್ನು ಕರೆದುಕೊಂಡು ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನಕ್ಕೆ ಹೋಗುತ್ತಾರೆ. ಅಲ್ಲಿ ಭಿಕ್ಷುಕರ ಸಾಲಿನಲ್ಲಿ ಕುಳಿತ ವ್ಯಕ್ತಿಯನ್ನು ಕಂಡು ವಿಜಯಮ್ಮ ಭಾವನಾತ್ಮಕ ಸಂವೇದನೆಗಳಿಗೊಳಗಾಗುತ್ತಾಳೆ. ಅವನನ್ನು ಮನೆಗೆ ಕರೆಯಬೇಕು ಎಂಬ ತವಕ ವಿಜಯಮ್ಮಳದು. ಆದರೆ ಪ್ರಭಾಕರರಾಯರು ಇದಕ್ಕೆ ಒಪ್ಪುವುದಿಲ್ಲ. ಆ ಭಿಕ್ಷುಕನ ಮುಖ ನೋಡಲೂ ಇಷ್ಟಪಡುವುದಿಲ್ಲ ರಾಯರು. ವಿಜಯಮ್ಮನ ತಳಮಳ, ಆತಂಕ ಭಿಕ್ಷುಕನ ಕಡೆಗಿನ ಅಪಾರ ಒಲವು ಅಪೂರ್ವಳಿಗೆ ಒಗಟಾಗಿ ಕಾಣುತ್ತದೆ. ಈತ ಯಾರಿರಬಹುದು? ಆತನನ್ನು ಕಂಡು ಮಾತನಾಡಿಸಬೇಕು ಎಂದು ಆಂಟಿ ಯಾಕಿಷ್ಟು ಹಂಬಲಿಸುತ್ತಾರೆ ಎಂಬ ಪ್ರಶ್ನೆ ಅಪೂರ್ವಳನ್ನು ಕಾಡುತ್ತದೆ. ಒಂದು ದಿನ ಆತ ವಿಜಯಮ್ಮನ ಮನೆಯ ಗೇಟಿನ ಬಳಿ ಬರುತ್ತಾನೆ. ಆತನನ್ನು ಮನೆಗೆ ಕರೆಯುತ್ತಾರೆ. ಇದರಿಂದ ಪ್ರಭಾಕರರಾಯರಿಗೆ ಸಿಟ್ಟು ಬರುತ್ತದೆ. ಅವನನ್ನು ಮನೆಯಿಂದ ಆಚೆ ಕಳಿಸುವಂತೆ ಹೇಳುತ್ತಾರೆ ರಾಯರು.

ಒದಗಿ ಬರುತ್ತಿತ್ತೇ? ತನ್ನನ್ನು ಹೆರುವಾಗ ಅಮ್ಮನನ್ನು ಕಳೆದುಕೊಂಡ ದುರದೃಷ್ಟವಂತೆ ತಾನು. ಆಕೆಯ ಮುಖವನ್ನೂ ಕಾಣುವ ಸೌಭಾಗ್ಯ ನನಗಿರಲಿಲ್ಲ. ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಮಲತಾಯಿ ತರಬಾರದೆಂದೋ, ಪತ್ನಿಗೆ ನಿಷ್ಠೆಯಿಂದ ಇರಬೇಕೆಂದೋ ಅಪ್ಪ ಮರುಮದುವೆ ಆಗಿರಲಿಲ್ಲ. ಅಜ್ಜಿಯ ಮಡಿಲಲ್ಲಿ ಬೆಳೆದ ನಾನು ಶಾಲೆ ಸೇರುವ ಹೊತ್ತಿಗೆ ಅಪ್ಪನೊಂದಿಗೆ ಬೆಂಗಳೂರಿಗೆ ಬಂದಿದ್ದೆ. ಶಾಲೆ ಕಲಿಯುವಾಗಲೇ ಅಜ್ಜಿ ನಮ್ಮನ್ನು ಅಗಲಿ ಹೋಗಿದ್ದರು. ಆನಂತರ ಶಿವಮೊಗ್ಗದ ಬಳಿ ಹಳ್ಳಿಯಲ್ಲಿ ನಾನು ಚಿಕ್ಕಮ್ಮನೊಂದಿಗೆ ಅವರ ಮನೆಯಲ್ಲಿ ವಾಸಿಸತೊಡಗಿದ್ದೆ. ಅಪ್ಪನನ್ನು ಮತ್ತೆಂದೂ ಕಂಡಿರಲಿಲ್ಲ. ಅವರು ಜೀವಂತವಾಗಿಲ್ಲ ಎಂಬ ಸತ್ಯ ವರ್ಷಗಳ ನಂತರ ತನಗೆ ಅರಿವಾಗಿತ್ತು. ನೋವು ನುಂಗಿ ಬದುಕುವುದು ತನಗೆ ಅಭ್ಯಾಸವಾಗಿತ್ತು. ಚಿಕ್ಕಮ್ಮ ಎಂದೂ ಪ್ರೀತಿಗೆ ದ್ರೋಹ ಬಗೆದಿರಲಿಲ್ಲ. ತಮ್ಮ ಮಕ್ಕಳಂತೆ ತನ್ನನ್ನೂ ನಿರ್ವಂಚನೆಯಿಂದ ಬೆಳೆಸಿದ್ದರು. ಚಿಕ್ಕಪ್ಪ ಸದಾ ಹಣದ ಹಿಂದೆ ಬೀಳುತ್ತಿದ್ದರು. ತನ್ನ ಹೆಸರಿಗೆ ಬರುತ್ತಿದ್ದ ಹಣ ಅವರ ಆರ್ಥಿಕ ಪರದಾಟಕ್ಕೆ ನೆರವಾಗುತ್ತಿತ್ತು. ಆದರೆ ತನಗೆ ಯಾರು ಹಣ ಕಳಿಸುತ್ತಿದ್ದರು, ಏಕೆ ಕಳಿಸುತ್ತಿದ್ದರು ಎಂಬ ಸತ್ಯ ತನಗಂತೂ ಗೊತ್ತಿರಲಿಲ್ಲ. ಕೇಳಿದಾಗ ಚಿಕ್ಕಮ್ಮ 'ಯಾರೋ ಪುಣ್ಯಾತ್ಮರು ಕಳಿಸ್ತಿದ್ದಾರೆ ಬಿಡು. ಹೀಗೆ ಬಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿ ಸಹಾಯ ಮಾಡುವ ದೊಡ್ಡ ಮನುಷ್ಯರ ಕೈಕಾಲು ಹಿಡಿದು ಈ ವ್ಯವಸ್ಥೆ ಮಾಡಿದ್ದೀನಿ' ಎಂದು ಮಾತು ತೇಲಿಸುತ್ತಿದ್ದರು. ಹೀಗೆ ದಿಕ್ಕಿಲ್ಲದ ತನ್ನ ಬಾಳ ದೋಣಿ ನನ್ನನ್ನು ಇಲ್ಲಿಗೆ ತಂದು ಮುಟ್ಟಿಸಿತ್ತು. ಇನ್ನು ಎರಡು ಸೆಮಿಸ್ಟರ್‌ಗಳನ್ನು ಮುಗಿಸಿದರೆ ತನ್ನ ಬಾಳು ನೆಲೆಗಂಡಂತೆ..ಆ ಬಳಿಕ ತಾನು ಆರ್ಥಿಕವಾಗಿ ಸ್ವತಂತ್ರ್ಯಳು' ಎನಿಸಿತ್ತು.

ಪ್ರಭಾಕರರಾಯರು ಅಣಿಯಾಗಿ ಹೊರಗೆ ಬಂದಾಗ ವಿಜಯಮ್ಮ ಪತಿಯನ್ನು ತಡೆದರು' 'ಈಗ ಕತ್ಲೇಲಿ ಎಲ್ಲೀಗೆ ಹೊರಟಿರಿ..?'

'ಅವ್ನಿರುವ ಮನೇಲಿ ನಾನಿರಲ್ಲ..ಅವ್ನು ಹೋದ್ಮೇಲೆ ನನ್ಗೆ ಹೇಳು..ನಾನು ಬರ್ತೀನಿ' ಹಿಂತಿರುಗಿಯೂ ನೋಡದೇ ಹೊರನಡೆದಾಗ ವಿಜಯಮ್ಮನಿಗೆ ದಿಕ್ಕು ತೋಚಲಿಲ್ಲ.

'ಅಪೂರ್ವ..ನೀನಾದ್ರೂ ಅವ್ರಿಗೆ ಹೇಳು.ಈಗ ಯಾಕೆ ಹೋಗ್ಬೇಕು..? ಅವ್ನೇನು ಶತ್ರುನಾ..? ಅವ್ನಿಗೂ ನಮ್ಜೊತೆ ಸಮಯ ಕಳೀಬೇಕೂಂತ ಆಸೆ ಇರಲ್ವಾ ಹೇಳು? ಅವ್ನು ಅನುಭವಿಸಿದ ಶಿಕ್ಷೆಗಿಂತಲೂ ಇವ್ರು ಕೊಡ್ತಾ ಇರುವ ಶಿಕ್ಷೆ ದೊಡ್ಡದು.' ಸೆರಗು ಕಣ್ಣಿಗಾನಿಸಿಕೊಂಡು ಬಿಕ್ಕಳಿಸಿದರು. ಅವರ ಮಾತಿನರ್ಥ ಅಪೂರ್ವಳಿಗೆ ತಿಳಿಯದೇ ಹೋದರೂ, ಅವಳು ರಾಯರನ್ನು ತಡೆಯುವ ಸಲುವಾಗಿ ಹೊರಗೆ ಧಾವಿಸಿದಳು.

'ಅಂಕಲ್..ಈಗೆಲ್ಲಿಗೆ ಹೊರಟಿರಿ? ದಯವಿಟ್ಟು ಒಳಗೆ ಬನ್ನಿ.' ಅಪೂರ್ವ ವಿನಂತಿಸಿಕೊಂಡರೂ ರಾಯರ ಬಡಪೆಟ್ಟಿಗೆ ಇದಕ್ಕೊಪ್ಪಲಿಲ್ಲ,'ನನ್ನನ್ನು ತಡೀಬೇಡ ಅಪೂರ್ವ..ನಿನ್ಗೆ ನನ್ನ ಮನಸ್ಥಿತಿ ಅರ್ಥವಾಗಲ್ಲ..ಅದನ್ನು ವ್ಯಕ್ತ ಪಡಿಸುವ ಪರಿಸ್ಥಿತಿಯಲ್ಲಿ ನಾನಿಲ್ಲ.. ಸದ್ಯಕ್ಕೆ ನನ್ನ ಪರಿಸ್ಥಿತಿ ಬಿಸಿ ತುಪ್ಪದಂತಾಗಿದೆ. ಉಗುಳಲೂ ಅಲ್ಲ..ನುಂಗಲೂ ಅಲ್ಲ..'

'ಅದೇನೂಂತ ನನ್ಹತ್ರ ಹೇಳಿದ್ರೆ..' ಅಪೂರ್ವ ಅಳುಕುತ್ತ ಸಲುಗೆ ತೋರುವ ಸಾಹಸ ಮಾಡಿದಳು.

'ಇಲ್ಲಮ್ಮಾ.. ನೀನಿನ್ನೂ ಚಿಕ್ಕೋಳು..ಅರ್ಥ ಮಾಡಿಕೊಳ್ಳಬೇಕಾದವಳು ಮಗನೆಂಬ ಮೋಹಕ್ಕೆ ಬಿದ್ದು ಕುರುಡಿಯಾಗಿರುವಾಗ, ಯಾರಲ್ಲಿ ಏನೆಂದು ಏನು ಪ್ರಯೋಜನ? ನಾನು ಬರ್ತೀನಮ್ಮ..'

'ಎಲ್ಲಿಗೆ ಹೋಗ್ತೀರಾ..? ಊಟವಾದರೂ ಮಾಡಿಕೊಂಡು ಹೋಗಿ' ಅಪೂರ್ವ ಆಗ್ರಹಿಸಿದರೂ ರಾಯರು ತಲೆ ಕೊಡವಿದರು.'ಯಾರಿಗಾಗಿ ಮಾಡಿದ್ದಾಳೋ..ಅವರೇ ಉಣ್ಣಲಿ..ನನಗೆ ಹಸಿವಿಲ್ಲ..' ರಾಯರು ಶೆಡ್ಡಿನಿಂದ ಕಾರು ಹೊರ ತೆಗೆದು ಹೊರಟೇ ಬಿಟ್ಟರು. ಅಪೂರ್ವ ಗೇಟು ಮುಚ್ಚಿ ಕಾಲೆಳೆದುಕೊಂಡು ಒಳಬಂದಳು. ಸೂರ್ಯನ ಬಳಿ ಇದ್ದ ಮೊಬೈಲ್‌ಗೆ ಕರೆ ಬಂದು ಆತ ಮಾತನಾಡುತ್ತ ಬಳಿಕ ತಾನಿರುವ ಈ ಮನೆಯ ವಿಳಾಸ ತಿಳಿಸುತ್ತಿದ್ದ.

'ಇವ್ರ ಹಠಕ್ಕೆ ನಾನು ಯಾವಾಗ್ಲೂ ಬಲಿಪಶು..ಹೋದ್ರೆ ಹೋಗಲಿ ಬಿಡು.. ಏನ್ಮಾಡ್ಲಿಕ್ಕಾಗುತ್ತೆ..? ಮನುಷ್ಯ ಯಾವಾಗ್ಲೂ ಒಂದೇ ಥರ ವರ್ತಿಸಲು ಆಗುತ್ತ ಹೇಳು..?' ಎಂದು ಗೊಣಗಿಕೊಂಡರು. ಅವರಿಗೆ ಸೂರ್ಯನ ಬಳಿ ಮಾತನಾಡಿದಷ್ಟೂ ಸಾಲದು. ತಾಯಿ ಮಗನ ಅಪರೂಪದ ಭೇಟಿಗೆ ಭಂಗ ತರಲಿಚ್ಛಿಸದೇ ಅಪೂರ್ವ ತನ್ನ ಕೋಣೆ ಸೇರಿಕೊಂಡಳು.

ವಿಜಯಮ್ಮ ಆಡಿದ ಮಾತುಗಳು ಅವಳ ಮನವನ್ನು ಕೊರೆಯ ತೊಡಗಿತ್ತು. ಸೂರ್ಯ ಶಿಕ್ಷೆ ಅನುಭವಿಸಿ ಬಂದಿದ್ದು ಸಾಲದೆಂಬಂತೆ, ರಾಯರು ಇನ್ನಷ್ಟು ಶಿಕ್ಷೆ ವಿಧಿಸುತ್ತಿದ್ದಾರೆ ಎಂಬ ಅರ್ಥದಲ್ಲಿ ಮಾತನಾಡಿದ್ದರು ವಿಜಯಮ್ಮ. ಸೂರ್ಯ ಎಂಥ ಶಿಕ್ಷೆ ಅನುಭವಿಸಿದ್ದ..? ಅವನೇಕೆ ದೇವಸ್ಥಾನದ ಹೊರ ಜಗುಲಿಯಲ್ಲಿ ಭಿಕ್ಷುಕರೊಂದಿಗೆ ಕುಳಿತಿದ್ದ.? ಅವನನ್ನು ರಾಯರು ಮನೆಯಿಂದ ಹೊರ ಹಾಕಿದ್ದರೇ? ಮಗನೆಂಬ ಪಟ್ಟದಿಂದ ಬಹಿಷ್ಕರಿಸಿದ್ದರೇ? ತಂದೆ ಮಗನ ನಡುವಿನ ವಿರಸಕ್ಕೆ ಕಾರಣವೇನು? ತಾಯಿ ಮಗ ವರ್ಷಗಳಿಂದ ದೂರವಾಗಲು ಕಾರಣವೇನಿರಬಹುದು? ಅಷ್ಟು ದಿನಗಳ ಕಾಲ ಸೂರ್ಯ ಎಲ್ಲಿದ್ದ? ಯಾಕಿದ್ದ? ಏನು ಇದರ ಹಿನ್ನೆಲೆ? ಅವನು ತೊಟ್ಟ ಬಟ್ಟೆ, ಅವನ ಅನಾಗರಿಕ ವರ್ತನೆ ಕಂಡರೆ, ಅವನು ಸಭ್ಯ ಅಥವಾ ಕೌಟುಂಬಿಕ ವಾತಾವರಣದಲ್ಲಿ ಬೆಳೆದಂತೆ ಕಾಣುತ್ತಿಲ್ಲ. ಇಂಥವರ ಮಗನಾಗಿ ಹುಟ್ಟಿಯೂ ಅವನೇಕೆ ಹೀಗೆ ಬೆಳೆಯಬೇಕು? ರಾಯರು ಅವನನ್ನು ಮಗನೆಂದು ಸ್ವೀಕರಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ? ಮಗನನ್ನು ಇಷ್ಟು ವರ್ಷಗಳ ಕಾಲ ಏಕೆ ತೊರೆದು ಬದುಕುತ್ತಿದ್ದಾರೆ? ಮಗನಿದ್ದೂ ಪುತ್ರ ಶೋಕವನ್ನೇಕೆ ಅನುಭವಿಸಿ ಜೀವನ ಸಾಗಿಸುತ್ತಿದ್ದಾರೆ? ರಾಯರಿಗೇಕೆ ಮಗನನ್ನು ಕಂಡರೆ ಅಷ್ಟೊಂದು ದ್ವೇಷ?' ಪ್ರಶ್ನೆಗಳ ಸುಳಿಯೊಳಗೆ ಸಿಲುಕಿ ಅಪೂರ್ವಳ ಮನಸ್ಸು ಹೊಯ್ದಾಡಿತು.

'ಅಪೂರ್ವ..ಊಟ ಮಾಡು ಬಾ..' ವಿಜಯಮ್ಮನ ದನಿ ಕೇಳಿ ಅಪೂರ್ವ ಎದ್ದು ಹೊರ ಬಂದಳು. ಅವಳು ಬರುವಷ್ಟರಲ್ಲಿ ಅವಳಿಗಾಗಿ ವಿಜಯಮ್ಮ ಬಡಿಸಿಟ್ಟಿದ್ದರು. ಅವಳಿಗೆ ಹಸಿವು ಮುಚ್ಚಿ ಹೋಗಿದ್ದರೂ ಅವರು ಆಗಲೇ ಬಡಿಸಿಟ್ಟಿದ್ದರಿಂದ ಎದುರಾಡಲಾರದೇ ಕುಳಿತಳು. ಎದುರಿಗೆ ಕುಳಿತಿದ್ದ ಸೂರ್ಯ ಎಷ್ಟೋ ವರ್ಷಗಳಿಂದ ಹಸಿವಿನಿಂದ ಕಂಗೆಟ್ಟವನಂತೆ ಊಟ ಮಾಡುತ್ತಿದ್ದ. ಅವನು ಊಟ ಮಾಡುತ್ತಿದ್ದ ರೀತಿ ಕಂಡು ವಿಚಿತ್ರವೆನಿಸಿತ್ತು. ಅಂಥ ಊಟವನ್ನು ಮೊದಲ ಬಾರಿ ಉಣ್ಣುವಂತೆ ಅವನು ಆಸ್ವಾದಿಸಿ ಉಣ್ಣುತ್ತಿದ್ದ. ವಿಜಯಮ್ಮ ಮುಕ್ತ ಹಸ್ತದಿಂದ ಅವನಿಗೆ ಬಡಿಸುತ್ತಿದ್ದರು.